# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 11.02.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ಇಂದು ಆರ್.ಟಿ.ನಗರ, ಗಂಗಾನಗರ, ದಾಸಪ್ಪ ಗಾರ್ಡನ್, ಚಾಮುಂಡಿನಗರ, ಸುಲ್ತಾನ್‌ಪಾಳ್ಯ, ಮಠದಹಳ್ಳಿ ಮುಂತಾದ ಪ್ರದೇಶಗಳಲ್ಲಿ ಬೆಳಿಗ್ಗೆ 6.30 ಗಂಟೆಗೆ ತಪಾಸಣೆ ಕೈಗೊಂಡು ಈ ಪ್ರದೇಶಗಳಲ್ಲಿ ಪ್ರತಿದಿನ ಕೈಗೊಳ್ಳಲಾಗುವ ಸ್ವಚ್ಛತೆ ಮತ್ತು ಕಸ ವಿಲೇವಾರಿ ಕಾರ್ಯವನ್ನು ಪರಿಶೀಲಿಸಿದರು.

ತಪಾಸಣೆ ಸಂದರ್ಭದಲ್ಲಿ ಸ್ಥಳೀಯ ಪಾಲಿಕೆ ಸದಸ್ಯರು ಮತ್ತು ಸಾರ್ವಜನಿಕರು ನೀಡಿದ ದೂರಿನ ಮೇರೆಗೆ ಪ್ರತಿನಿತ್ಯ ಕಸ ಸಂಗ್ರಹಣೆಗೆ ಗುರುತಿಸಲಾದ ಸ್ಥಳಗಳನ್ನು ವೀಕ್ಷಿಸಿದರು. ಈ ಸ್ಥಳಗಳು ಕಸ ಸಂಗ್ರಹಣೆಗೆ ತಾತ್ಕಾಲಿಕ ಸ್ಥಳಗಳೆಂದು ಗುರುತಿಸಿದರೂ ಕೂಡಾ ಈ ಸ್ಥಳಗಳಲ್ಲಿ ಸಾರ್ವಜನಿಕರು ಮತ್ತು ಸುತ್ತಮುತ್ತಲಿನ ಅಂಗಡಿ ಮುಗ್ಗಟ್ಟಿನವರು ದಿನವಿಡಿವೆಲ್ಲಾ ಕಸ ಹಾಕುವುದರಿಂದ blackspot ಗಳಾಗಿ ಪರಿವರ್ತನೆಗೊಂಡಿವೆ. ಇದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ದುರ್ವಾಸನೆ ಹರಡಿ, ತೊಂದರೆಯಾಗುತ್ತಿರುವುದನ್ನು ಗಮನಿಸಿದರು. ಸಂಬಂಧಪಟ್ಟ ಪರಿಸರ ಅಭಿಯಂತರರಿಗೆ ಸೂಚನೆ ನೀಡಿ, ಇಂತಹ ಸ್ಥಳಗಳಿಂದ ದಿನಕ್ಕೆ ಎರಡು ಬಾರಿ ಕಸ ಸಾಗಿಸುವಂತೆ ಕ್ರಮ ಜರುಗಿಸಲು ಸೂಚಿಸಿದರು. ಈ ಕಾರ್ಯ ನಾಳೆಯಿಂದಲೇ ಜಾರಿಗೆ ಬರಬೇಕು ಮತ್ತು ಸಾರ್ವಜನಿಕರಿಂದ ಖುದ್ದಾಗಿ ಮಾಹಿತಿ ಪಡೆಯುವುದಾಗಿ ಆಯುಕ್ತರು ತಿಳಿಸಿದರು.

ಆರ್.ಟಿ.ನಗರದ 9ನೇ ಕ್ರಾಸ್, 2ನೇ ಬ್ಲಾಕ್ ರಸ್ತೆಯಲ್ಲಿ ಒಂದು ಕಟ್ಟಡ ನಿರ್ಮಾಣಗೊಳ್ಳುತ್ತಿದ್ದು, ಕಟ್ಟಡದ ಸಾಮಗ್ರಿಗಳನ್ನು ಕಳೆದ ಒಂದು ವರ್ಷದಿಂದ ರಸ್ತೆ ಮೇಲೆ ಹಾಕಿ ವಾಹನ ಸಂಚಾರಕ್ಕೆ ಅಡ್ಡಿಯುಂಟು ಮಾಡುತ್ತಿದ್ದು, ಇದನ್ನು ಗಮನಿಸಿದ ಆಯುಕ್ತರು ಕೂಡಲೇ ಕಟ್ಟಡದ ಮಾಲೀಕರಿಗೆ ನೋಟೀಸ್ ಜಾರಿ ಮಾಡಲು ಮತ್ತು ರಸ್ತೆ ಮೇಲೆ ಇದ್ದ ಸಾಮಗ್ರಿಗಳನ್ನು ತೆರವುಗೊಳಿಸುವಂತೆ ಕ್ರಮ ಜರುಗಿಸಲು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು.

ಆರ್.ಟಿ.ನಗರದ 2ನೇ ಬ್ಲಾಕ್‌ನ 3ನೇ ಮುಖ್ಯರಸ್ತೆಯಲ್ಲಿ ಅನಧಿಕೃತವಾಗಿ ಹೋಟೆಲ್ ನಡೆಸುತ್ತಿದ್ದು, ಇದರಿಂದ ಹೋಟೆಲ್‌ಗೆ ಬರುವಂತಹ ಸಾರ್ವಜನಿಕರು ರಸ್ತೆಯ ಮೇಲೆ ವಾಹನ ನಿಲುಗಡೆ ಮಾಡುತ್ತಿದ್ದು, ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ ಆಯುಕ್ತರು ಸ್ಥಳ ತಪಾಸಣೆ ನಡೆಸಿ, ಅನಧಿಕೃತ ಹೋಟೆಲ್ ಮುಚ್ಚಲು ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳಿಗೆ ಆದೇಶಿಸಿದರು.

ವಾರ್ಡ್ 46, ಜಯಚಾಮರಾಜೇಂದ್ರನಗರದಲ್ಲಿ ಬರುವ ಮಠದಹಳ್ಳಿ ಮುಖ್ಯರಸ್ತೆಯಲ್ಲಿ ಪಾಲಿಕೆಗೆ ಸೇರಿದ ಕಟ್ಟಡದಲ್ಲಿ ಹೊಲಿಗೆ ತರಬೇತಿ ಕೇಂದ್ರ ಬೆಂಗಳೂರು ಜಿಲ್ಲಾ ಪಂಚಾಯತ್ ಕಡೆಯಿಂದ ಅಂಗನವಾಡಿ ಕೇಂದ್ರ ನಡೆಯುತ್ತಿದೆ. ಈ ಕಟ್ಟಡದ ಒಂದು ಭಾಗ ಶಿಥಿಲಗೊಂಡಿದೆ. ಇದರಿಂದ ಮಕ್ಕಳಿಗೆ ತೊಂದರೆಯಾಗುತ್ತಿದೆ ಎಂದು ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಎನ್. ಗೋವಿಂದರಾಜ್ ರವರು ದೂರು ನೀಡಿರುವ ಹಿನ್ನೆಲೆಯಲ್ಲಿ ಪಾಲಿಕೆ ಆಯುಕ್ತರು ಸ್ಥಳಕ್ಕೆ ಭೇಟಿ ನೀಡಿ ಕಟ್ಟಡವನ್ನು ಪರಿಶೀಲಿಸಿ, ಇಂದೇ ಖಾಸಗಿ ಕಟ್ಟಡವನ್ನು ಬಾಡಿಗೆಗೆ ಪಡೆದು, ಆ ಕಟ್ಟಡಕ್ಕೆ ಹೊಲಿಗೆ ತರಬೇತಿ ಕೇಂದ್ರ ಮತ್ತು ಅಂಗನವಾಡಿ ಕೇಂದ್ರವನ್ನು ಸ್ಥಳಾಂತರಿಸಿ, ಕಟ್ಟಡದ ದುರಸ್ಥಿ ಕಾರ್ಯವನ್ನು ಕೂಡಲೇ ಪ್ರಾರಂಭಿಸಲು ಕಾರ್ಯಪಾಲಕ ಅಭಿಯಂತರರಿಗೆ ಸೂಚನೆ ನೀಡಿದರು. ಕಟ್ಟಡದ ಬಾಡಿಗೆಯನ್ನು ಪಾಲಿಕೆಯಿಂದ ಭರಿಸಲಾಗುವುದೆಂದು ಆಯುಕ್ತರು ತಿಳಿಸಿದರು.

ಈ ಸಂದರ್ಭದಲ್ಲಿ ವಿಧಾನಸಭಾ ಸದಸ್ಯರಾದ ಶ್ರೀ ಎಂ.ಶ್ರೀನಿವಾಸ್, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಅಧ್ಯಕ್ಷರು ಹಾಗೂ ವಾರ್ಡ್ 34, ಗಂಗೇನಹಳ್ಳಿ ಪಾಲಿಕೆ ಸದಸ್ಯರಾದ ಶ್ರೀ ಎಂ. ನಾಗರಾಜ್, ವಾರ್ಡ್ 46, ಜಯಚಾಮರಾಜೇಂದ್ರನಗರದ ಪಾಲಿಕೆ ಸದಸ್ಯರಾದ ಶ್ರೀ ಎನ್. ಗೋವಿಂದರಾಜ್, ವಾರ್ಡ್ 33, ಮನೋರಾಯನಪಾಳ್ಯ ಪಾಲಿಕೆ ಸದಸ್ಯರಾದ ಶ್ರೀಮತಿ ಫೌಜೀಯ ಬೇಗಂ ಹಾಗೂ ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**